# ಅಬ್ಬಾಲ ಜಲಧಾರೆ



■ ಪುತ್ತರಿರ ಕರುಣ್ ಕಾಳಯ್ಯ
ಚಿತ್ರ: ಪಪ್ಪು ತಿಮ್ಮಯ್ಯ

ಮಡಿಕೇರಿಯಿಂದ ಸುಮಾರು 12 ಕಿ.ಮೀ ದೂರಕ್ಕೆ ಅಗಲ ಕಿರಿದಾದ ಚೆಟ್ಟಳ್ಳಿ ರಸ್ತೆಯಲ್ಲಿ ಬೆಟ್ಟಗುಡ್ಡಗಳ ನಡುವೆ ಸಾಗುವ ಮಾರ್ಗದಲ್ಲಿ ಅಬ್ಯಾಲವೆಂಬ ಪುಟ್ಟ ಊರಿದೆ. ಸುಮಾರು 450 ರಿಂದ 500 ಅಡಿಗಳಷ್ಟು ಮೇಲಿಂದ ಕಲ್ಲುಬಂಡೆಗಳ ನಡುವೆ ಹಾಲಿನ ನೊರೆಯಂತೆ ಧುಮ್ಮಿಕ್ಕುವ ಜಲಧಾರೆಯೇ ಈ ಅಬ್ಯಾಲ ಜಲಧಾರೆ.

ಮಳೆಗಾಲದ ಜಲಧಾರೆಗಳ ವಿಶೇಷವೆಂದರೆ ಮಳೆಯ ರಭಸದ ಮೇಲೆ ಅದರ ಸೌಂದರ್ಯದಲ್ಲಿ ವ್ಯತ್ಯಾಸ ಕಾಣುವುದು. ಪ್ರತೀ ವರ್ಷ ಮಳೆ ಪ್ರಾರಂಭವಾದೊಡನೆ ಮೆಲ್ಲಗೆ ಹರಿದು ಬರುವ ಜಲಧಾರೆ ಮಳೆಯ ರಭಸ ಹೆಚ್ಚಿದಂತೆಲ್ಲ ಬೋರ್ಗರೆಯುತ್ತದೆ. ಹಾಲು ಉಕ್ಕಿ ಹರಿದಂತೆ ಕಾಣುವ ಈ ಜಲಪಾತ ಆಕರ್ಷಣೀಯ.

ಮಡಿಕೇರಿಯಿಂದ ಚೆಟ್ಟಳ್ಳಿಯ ಮಾರ್ಗವಾಗಿ ತೆರಳುವವರೆಲ್ಲರನ್ನೂ ಈ ಜಲಧಾರೆ ಆಕರ್ಷಿಸುತ್ತಿದ್ದು ಕೆಲವರು ವಾಹನ ನಿಲ್ಲಿಸಿ ಫೋಟೊ ಕ್ಲಿಕ್ಕಿಸಿಯೇ ತೆರಳುತ್ತಾರೆ. ಕೆಲವರು ಜಲಧಾರೆಯೊಂದಿಗೆ ಸೆಲ್ಫಿ ತೆಗೆಯುತ್ತಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಮಳೆಗಾಲ ಮುಗಿದ ಬಳಿಕವೂ ಕೆಲವು ತಿಂಗಳ ಕಾಲ ಈ ಜಲಧಾರೆ ತನ್ನ ಸೌಂದರ್ಯವನ್ನು ಕಾಪಿಟ್ಟುಕೊಳ್ಳುತ್ತದೆ. ●